**9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ. 264 /2019**

**(ಪ್ರಾ.ಸಾ.1 / ಚಾ.ಸಾ.1)**

ತಾಃ 18-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪ್ರಕಾಶ್ |
| ತಂದೆಯ ಹೆಸರು/ ಗಂಡನ ಹೆಸರು | ಃ | ಪರಮೇಶ್ವರಪ್ಪ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಡ್ರೈವರ್ |
| ವಾಸ ಸ್ಥಳ | ಃ | ಅಬ್ಬಿಗೆರೆ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಚಾ.ಸಾ 2 ನನ್ನ ಪಕ್ಕದ ಮನೆಯವರು, ನಾನು ಅಬ್ಬಿಗೆರೆಯಲ್ಲಿ ವಾಸ ಮಾಡುತ್ತೇನೆ. ಚಾ.ಸಾ 2 ನಮ್ಮ ಮನೆಯ ಪಕ್ಕದಲ್ಲಿ ವಾಸ ಮಾಡುತ್ತಿದ್ದು ಸದರಿ ಮನೆಯಲ್ಲಿ ಚಿಕ್ಕದಾಗಿ ಒಂದು ಟೀ ಅಂಗಡಿ ಇಟ್ಟುಕೊಂಡಿದ್ದಾರೆ. ಅವರು ನನಗೆ 2013ರಿಂದ ಪರಿಚಯ ಇದ್ದಾರೆ.

ದಿನಾಂಕಃ 24-12-2018ರಂದು ಮಧ್ಯಾಹ್ನ 2.30ರಿಂದ 3.00ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಊಟ ಮಾಡಿ ಕುಳಿತುಕೊಂಡಿದ್ದಾಗ, ಕಾಪಾಡಿ ಕಾಪಾಡಿ ಎಂದು ಕಿರುಚಿಕೊಳ್ಳುತ್ತಿದ್ದರು, ನಾನು ಕೂಡಲೇ ಹೊರಗಡೆ ಬಂದಾಗ ಚಾ.ಸಾ 2ರವರ ಕತ್ತನ್ನು ಕೊಯ್ದಿದ್ದರು, ಅಲ್ಲಿಂದ ರಕ್ತ ಬಂದು ಅವರ ಬಟ್ಟೆಯೆಲ್ಲಾ ರಕ್ತ ಆಗಿದ್ದು ಪ್ರಜ್ಞೆ ತಪ್ಪಿ ಬಿದ್ದಿದ್ದರು, ನಾನು ಕೂಡಲೇ ನನ್ನ ಕಾರಿನಲ್ಲಿ ಅವರನ್ನು ಎಸ್ ಕೆ ಹೆಲ್ತ್ ಕೇರ್ ಆಸ್ಪತ್ರೆಗೆ ಸಾಗಿಸಿದ್ದೇನೆ.

ಸದರಿ ವಿಷಯವನ್ನು ನಾನು ಆಕೆಯ ಮಗಳಿಗೆ ಮತ್ತು ತಂದೆಗೆ ಫೋನ್ ಮೂಲಕ ತಿಳಿಸಿದ್ದೇನೆ. ಪೋಲೀಸರು ಸಂಜೆ ಸುಮಾರು 5.45 ರಿಂದ 6.00ಗಂಟೆಗೆ ನಮ್ಮ ಮನೆಯ ಬಳಿ ಬಂದು ನನ್ನ ದೂರನ್ನು ಪಡೆದುಕೊಂಡು ಸ್ಥಳದಲ್ಲಿ ಮಹಜರ್ ಮಾಡಿದ್ದಾರೆ. ಚಾ,ಸಾ 2ರವರ ಮನೆಯ ಬಾಗಿಲಿಗೆ, ಮನೆ ಹಾಲ್‌ನಲ್ಲಿ ರಕ್ತದ ಕಲೆಯಾಗಿತ್ತು ಅದನ್ನು ಹತ್ತಿಯಿಂದ ಸಂಗ್ರಹಿಸಿದ ಸ್ಥಳದಲ್ಲಿ ಬಿದಿದ್ದ ಸಿಗರೇಟ್ ಪೀಸ್‌ಗಳನ್ನು ಜಪ್ತಿ ಮಾಡಿದ್ದಾರೆ ಹಾಗೂ ಮಾದರಿ ಹತ್ತಿಯನ್ನು ಸಹ ಜಪ್ತಿ ಮಾಡಿದ್ದಾರೆ.

ಸೀಲ್ ಆಗಿರುವ ಪ್ಲಾಸ್ಟಿಕ್ ಡಬ್ಬಿಯ ಬಟ್ಟೆಯನ್ನು ತೆರೆಯಲಾಯಿತು, ಸಾಕ್ಷಿ ರಕ್ತ ಆಗಿದ್ದ ಹತ್ತಿಯನ್ನು ಮತ್ತು ಸಾದಾ ಹತ್ತಿಯನ್ನು ಗುರುತಿಸಿರುತ್ತಾರೆ. ಅವುಗಳನ್ನು ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು. ನಾನು, ಶೇಖರ್ ಹಾಗೂ ಶೇಖರ್‌ರವರ ಹೆಂಡತಿ ಪುಂಗಮ್ಮ, ಚಾ.ಸಾ 2ರವರನ್ನು ಆಸ್ಪತ್ರೆಗೆ ಸಾಗಿಸಿದ್ದೇವೆ.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿ.ಪಿ 1 ಎಂದು ಸಾಕ್ಷಿಯ ಸಹಿಯನ್ನು 1ಎ ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್‌ನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಮಹಜರ್‌ನ್ನು ನಿ.ಪಿ 2 ಎಂದು ಸಾಕ್ಷಿಯ ಸಹಿಯನ್ನು 2ಎ ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನಾನು, ಹರೀಶ್ ಬಾಬು ಮತ್ತು ಚಂದ್ರಕಾಂತ್ ಎನ್ನುವವರು ಇದ್ದೆವು.

ಆಸ್ಪತ್ರೆಯಲ್ಲಿ ನಾನು ಗಾಯಾಳುವನ್ನು ವಿಚಾರಣೆ ಮಾಡಿದಾಗ ಗಾಯಾಳು ನಾನು ಅಂಗಡಿಯಲ್ಲಿ ಟೀ ಮಾರುತ್ತಿದ್ದಾಗ ಒಬ್ಬ ವ್ಯಕ್ತಿ ಬಂದು ಟೀ ಪಡೆದುಕೊಂಡು ಟೀ ಕುಡಿದ ನಂತರ ಆತನಿಗೆ ಸೀಗರೇಟ್ ಕೊಟ್ಟು ಅಡುಗೆ ಮಾಡುವ ಕೆಲಸಕ್ಕೆ ಚಾ.ಸಾ 2 ಮನೆಯ ಒಳಭಾಗಕ್ಕೆ ಹೋದಾಗ ಸದರಿ ವ್ಯಕ್ತಿ ಯಾರೂ ಇಲ್ಲದ್ದನ್ನು ನೋಡಿಕೊಂಡು ಮನೆಯ ಒಳಗಡೆ ಹೋಗಿ ಆಕೆ ಅಡುಗೆ ಮನೆಯಲ್ಲಿದ್ದಾಗ ಹಿಂದಿನಿಂದ ಆಕೆಯ ಬಾಯಿಯನ್ನು ಕೈಯಿಂದ ಮುಚ್ಚಿ, ಆಕೆಯ ಕತ್ತಿನಲ್ಲಿದ್ದ ಮಾಂಗಲ್ಯ ಸರವನ್ನು ಹಿಡಿದುಕೊಂಡು ಜೋರಾಗಿ ಎಳೆದಾಗ ಆಕೆ ಎಳೆಯುವುದನ್ನು ತಡೆದಾಗ ಸದರಿ

ವ್ಯಕ್ತಿ ಚಾಕುವಿನಿಂದ ಆಕೆಯ ಕತ್ತನ್ನು ಕೊಯ್ದು ಆಕೆಯ ಚೈನನ್ನು ಕಿತ್ತುಕೊಂಡಿದ್ದು ಆತನ ಕೈಗೆ ಸ್ವಲ್ಪ ಭಾಗ ಮಾತ್ರ ಹೋಗಿದ್ದು ಉಳಿದ ಭಾಗ ಆಕೆಯ ಮೈಲೆ ಇದ್ದು ಓಡಿ ಹೋಗಿದ್ದಾನೆ ಎಂದು ತಿಳಿಸಿದರು.

ಮಾರನೇ ದಿನ ಪೋಲೀಸರು ನನ್ನನ್ನು ಠಾಣೆಗೆ ಕರೆಸಿ ಒಬ್ಬ ವ್ಯಕ್ತಿಯನ್ನು ತೋರಿಸಿದ್ದಾರೆ ಆತನ ಹೆಸರು ವಿನೋದ್ ಎಂದು ನನಗೆ ತಿಳಿಸಿದರು, ಆತ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ. ಪೋಲೀಸರು ಆತನ ಕಡೆಯಿಂದ ಒಂದು ರೇಸರ್‌ನ್ನು ಜಪ್ತಿ ಮಾಡಿದ್ದಾರೆ ಎಂದು ಗೊತ್ತಾಯಿತು, ಆ ರೇಸರ್‌ನ್ನು ನನಗೆ ಠಾಣೆಯಲ್ಲಿ ತೋರಿಸಿದ್ದಾರೆ. ಅದೇ ರೀತಿ ಆರೋಪಿ ಕಡೆಯಿಂದ ಜಪ್ತಿ ಮಾಡಿದ ಚೈನಿನ ಪೀಸನ್ನು ಸಹ ತೋರಿಸಿದ್ದಾರೆ.

ಸೀಲ್ ಆಗಿರುವ ಸಣ್ಣ ಬ್ಯಾಗನ್ನು ತೆರೆಯಲಾಯಿತು, ಅದರಲ್ಲಿರುವ ಒಂದು ರೇಸರ್‌ನ್ನು ಗುರುತಿಸಿದ್ದು ಅದನ್ನು ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ಮು,ಮಾ 3 ಎಂದು ಗುರುತಿಸಲಾಯಿತು.

**ಈ ಸಂದರ್ಭದಲ್ಲಿ ಜಪ್ತಿ ಮಾಡಿದ ವಸ್ತುಗಳನ್ನು ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು.**

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಜೆ.ವಿ ವಿಜಯಾನಂದ)
9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.